

ಬರುತ್ತ ಬರುತ್ತ ಅಕ್ಷರ ಅವನಿಗೆ ಇಷ್ಟ ಆಗ್ತ ಹೋದ್ವು. ಏಳ್ನೆ ಕ್ಲಾಸ್ ಪಾಸಾದ್ಮೇಲೆ ವಿದ್ಯೆಗೆ ಮುಂದಿದ್ದ ಅವುನ್ನ ಯಂಕ್ಟಪ್ಪ ಮೇಷ್ಟ್ರೇ ದೂರ್ದ ಬಿಟ್ಣುಪುರಟೌನ್ ಹೈಸ್ಕೂಲ್ಗೆ ಸೇರ್ಸಿ ಬಂದಿದ್ರು. ಕದ್ರಂಗೂ ಅದೇ ಬೇಕಾಗಿತ್ತು. ಹಟ್ಟಿ ಸವಾಸವೇ ಬೇಡವೆಂದುಕೊಂಡವನಿಗೆ ತನ್ನಳ್ಳಿಯಿಂದ ತುಂಬಾ ದೂರದ ಬಿಟ್ಣುಪುರಟೌನ್‌ನ ಹೈಸ್ಕೂಲ್ ಇಷ್ಟವಾಯ್ತು. ಅಲ್ಲಿನ ಹಾಸ್ಟೆಲ್‌ನಲ್ಲಿ ಮುಳ್ಗಿ ತನ್ನೂರಿನ ಜಾತಿಗರ ಕಣ್ಣಿಂದ ಪಾರಾಗಿದ್ದ. ಹಾಸ್ಟೆಲ್‌ನಲ್ಲಿ ಕೊಡ್ತಿದ್ದ ಲೈಫ್‌ಬಾಯ್ ಸೋಪು, ಬಟ್ಟೆವಗ್ಯೋ ಸೋಪು, ತಲೆಗೆಣ್ಣೆ, ದೊಡ್ಡದೊಡ್ಡ ತಟ್ಟೆ... ಇವೆಲ್ಲಾ ಕಾಂತನಿಗೆ ಹೊಸವೇ ಆಗಿದ್ದವು. ಯಾವಾಗ್ಲಾದ್ರೂ ಊರಿಗೋದ್ರೇ ಮಿಕ್ಕಿರೋ ಅವುನ್ನೆಲ್ಲಾ ತಗೊಂಡೋಗಿ ಅವ್ವ ಅಪ್ಪರಿಗೆ ಕೊಟ್ಟು ಬತ್ತಿದ್ದ. ಹಾಸ್ಟೆಲ್ನಾಗೆ ಕೊಡ್ತಿದ್ದ ಚಿತ್ರನ್ನನ ಕತೆ ಕಟ್ಟಿ ವರ್ಣಿಸುತ್ತಿದ್ದ. ತಿಂಗಳಿಗೊಮ್ಮೆಯಾದ್ರೂ ಟಿಫಿನ್‌ಕೇರಿಲಿ